**ದಿನಾಂಕ 16-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲುಃ BS ಪ್ರತಿವಾದಿ ಪರ ವಕೀಲರಿಂದ**

ನಾನು 7 ನೇ ತರಗತಿ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ಗೊತ್ತಿಲ್ಲ. ನನಗೆ ಸೇರಿದ ಆಸ್ತಿಗಳು ಇರುತ್ತವೆ. ನನಗೆ ಸೇರಿದ ಜಮೀನು ಖಾನಪೂರು ಗ್ರಾಮದ ಸ.ನ.981 ಇರುತ್ತದೆ. ನನ್ನ ಮನೆ ನಂ. ಗೊತ್ತಿಲ್ಲ. ದಾವೆಯನ್ನು ವಾದಿಯು ಭಾಗಕ್ಕಾಗಿ ಸಲ್ಲಿಸಿರುತ್ತಾನೆ. ದಾವ ಆಸ್ತಿಗಳು ಮನೆ ಮತ್ತು ಜಮೀನು ಆಗಿರುತ್ತದೆ. ಜಮೀನು ಸ.ನಂ.448/1 ಆಗಿರುತ್ತದೆ. ಮ.ನಂ.11/54 ಇರುತ್ತದೆ. ವಾದಿ ಹೇಳಿದ್ದರಿಂದ ಅವರ ಮನೆ ನಂ. ಗೊತ್ತಾಗಿರುತ್ತದೆ. ವಾದಿ ತಂದೆ ಹೆಸರು ಹನುಮಂತ ಇರುತ್ತದೆ. ಸದರಿ ಹನುಮಂತ 10 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ.

ಪ್ಲಾಟ್ 54 ವೆಂಕಟೇಶ್ವರ ತಂದೆ ಬೂದೆಪ್ಪನಿಗೆ ಸೇರಿದ ಪ್ಲಾಟ್ ಆಗಿತ್ತು. ಸದರಿ ವೆಂಕಟೇಶ್ವರ ಹೆಸರಿನಲ್ಲಿ ಇದ್ದ ದಾಖಲಾತಿಗಳನ್ನು ನಾನು ನೋಡಿಲ್ಲ. ಖರೀದಿ ವ್ಯವಹಾರದ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಸದರಿ ಪ್ಲಾಟು ಯಾರಿಂದ ಯಾರಿಗೆ ಎಷ್ಟು ಮೊತ್ತಕ್ಕೆ ಮತ್ತು ಯಾವ ದಿನಾಂಕ ಆಗಿರುತ್ತದೆ ನನಗೆ ಗೊತ್ತಿಲ್ಲ.

ಪ್ಲಾಟ್ 54 ನ್ನು 4 ನೇ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿರುತ್ತಾನೆ ಎಂದರೆ ಸಾಕ್ಷಿಯು ತಂದೆ ಹನುಮಂತಪ್ಪ ಮೃತಪಟ್ಟ ನಂತರ ಹಣ ಬಂದಿದ್ದು ಸದರಿ ಹಣದಿಂದ ಪ್ಲಾಟ 54 ನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅವರ ತಂದೆ ಮರಣ ನಂತರ ಎಷ್ಟು ಹಣ ಯಾರ ಹೆಸರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಹನುಮಂತಪ್ಪ ಇವರ ಮರಣದ ನಂತರ ಬಂದ ಹಣದಿಂದ ಪ್ಲಾಟ್ 54 ನ್ನು ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 2 ಲಕ್ಷ ಸಾಲ ಪಡೆದು ಪ್ಲಾಟನ್ನು ಖರೀದಿ ಮಾಡಿರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಖರೀದಿ ಕಾಲಕ್ಕೆ ಮಂಜುನಾಥ ವಿದ್ಯಾಭ್ಯಾಸ ಮಾಡುತ್ತಿದ್ದು ಸಾಲ ಪಡೆದು ಖರೀದಿ ಮಾಡಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಕಾಲಕ್ಕೆ ಮಂಜುನಾಥ ವಿದ್ಯಾಭ್ಯಾಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇದ್ದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.